## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಿ.ವಿ.ರಾಮನ್‌ನಗರ ಉಪ ವಿಭಾಗ, ವಾರ್ಡ್ ಸಂಖ್ಯೆ:57, ಸಿ.ವಿ.ರಾಮನ್‌ನಗರ
## ವಾರ್ಡ್ ಸಮಿತಿ ಸಭೆ, ದಿನಾಂಕ:07-08-2021ರ ಸಭಾ ನಡವಳಿಗಳು

ದಿನಾಂಕ:7-08-2021ರಂದುಬೆಳಗ್ಗೆ 10.00 ಗಂಟೆಗೆ ವಾರ್ಡ್-57 ವಾರ್ಡ್-57 ಸಿ.ವಿ.ರಾಮನ್‌ನಗರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್‌ಅಧಿಕಾರಿಯವರಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ಸಹಾಯಕಕೇಂದ್ರ, ಕಗ್ಗದಾಸಪುರ(ಬೈರಸಂದ್ರ), ಸಿ.ವಿ.ರಾಮನ್‌ನಗರಇಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಸಭೆಯಲ್ಲಿ ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರುಗಳು**

| ಕ್ರಮ ಸಂ | ಹಾಜರಿದ್ದ ವಾರ್ಡ್‌ಕಮಿಟಿ ಸದಸ್ಯರುಗಳು | ಪ್ರವರ್ಗ |
|---|---|---|
| 1 | ಶ್ರೀ.ರಂದೀಪ್.ಡಿ ಭಾ.ಆ.ಸೇ ವಿಶೇಷ ಆಯುಕ್ತರು (ಆಡಳಿತ ಮತ್ತುಘನತ್ಯಾಜ್ಯ ನಿರ್ವಹಣೆ) | ಅಧ್ಯಕ್ಷರು ಮತ್ತು ನೋಡೆಲ್‌ಅಧಿಕಾರಿರವರು |
| 2 | ಶ್ರೀಮತಿ.ಶಾಂತಾ ಬಾಡಗಂಡಿ | ಕಾರ್ಯದರ್ಶಿ |
| 3 | ಶ್ರೀ.ಸತ್ಯನಾರಾಯಣ. | ಸದಸ್ಯರು |

ಸಭೆಯಲ್ಲಿ ಹಾಜರಿದ್ದಅಧಿಕಾರಿ/ಸಿಬ್ಬಂಧಿಗಳು

1) ಶ್ರೀಮತಿ.ಮೀನಾಕ್ಷಿ. ಹಿರಿಯಆರೋಗ್ಯ ಪರಿವೀಕ್ಷಕರು
2) ಕುಮಾರಿ.ಸಹನ, ಸಹಾಯಕಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ
3) ಶ್ರೀಮತಿ.ರೂಪ ಸಮಾಜಕಲ್ಯಾಣ ಇಲಾಖೆ

ಸಭೆಯಲ್ಲಿ ಹಾಜರಿದ್ದಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳನ್ನು ಕಮಿಟಿಯ ಕಾರ್ಯದರ್ಶಿಗಳು ಸಭೆಗೆ ಆಗಮಿಸಿರುವುದಕ್ಕೆ ಸ್ವಾಗತಕೋರಿದರು. ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನುಆರಂಭಿಸಲಾಯಿತು.

**ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳು:-**

| ಕ್ರ.ಸಂ | **ಮಾಹಿತಿ** | **ಕ್ರಮ ವಹಿಸಬೇಕಾಗಿರುವಅಧಿಕಾರಿ** | **ಕೈಗೊಂಡಕ್ರಮ** |
|---|---|---|---|
| | **ಪ್ರಾಥಮಿಕಆರೋಗ್ಯಕೇಂದ್ರ(PHC)** | | |
| 1 | ಸಾರ್ವಜನಿಕರಿಗೆ ಲಸಿಕೆ ಹಾಕಿಸಿಕೊಳ್ಳಲು ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಲಾಯಿತು. | ವೈಧ್ಯಾಧಿಕಾರಿಗಳು | **Pending** |
| 2 | ವೆಚಿಡರ್ ಜೋನ್‌ಗಳಲ್ಲಿ ಕೋವಿಡ್-19 ಪರೀಕ್ಷೆಗಳನ್ನು ನಡೆಸಲು ಸೂಚಿಸಲಾಯಿತು. | ವೈಧ್ಯಾಧಿಕಾರಿಗಳು | **Pending** |
| 3 | ಬಡಾವಣೆಗಳಲ್ಲಿ ಕೋವಿಡ್-19 ಲಸಿಕಾ ಕ್ಯಾಂಪ್‌ಗಳನ್ನು ಹಮ್ಮಿಕೊಂಡು ಲಸಿಕೆ ನೀಡಲು ಸೂಚಿಸಲಾಯಿತು. | ವೈಧ್ಯಾಧಿಕಾರಿಗಳು | **Pending** |

HBgq

ಸ್ಕ.

Scanned with CamScanner

| | | | |
|---|---|---|---|
| | **ಘನತ್ಯಾಜ್ಯ ನಿರ್ವಹಣೆ(SWM)** | | |
| 1 | ಕಸ ಸಂಗ್ರಹಣೆ ವಾಹನಗಳಿಗೆ ಮೈಕ್‌ನ್ನು ಅಳವಡಿಸಲು ಸೂಚಿಸಲಾಯಿತು. | Junior Health Inspector | Pending |
| 2 | ಭುವನೇಶ್ವರಿ ನಗರ ಪಾರ್ಕ್, ಕಗ್ಗದಾಸಪುರ ಮುಖ್ಯ ರಸ್ತೆಯಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಸ್ಥಳಗಳನ್ನು ಗುರುತಿಸುವಂತೆ ತಿಳಿಸಲಾಯಿತು. | Junior Health Inspector | ಸದರಿ ಸ್ಥಳದಲ್ಲಿ ಶೌಚಾಲಯ ನಿರ್ಮಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. |
| 4 | ಕಗ್ಗದಾಸಪುರ ಮುಖ್ಯರಸ್ತೆಯ ಭುವನೇಶ್ವರಿನಗರ Entranceನಲ್ಲಿ ಇ-ಶೌಚಾಲಯ ನಿರ್ಮಿಸುವಂತೆ ಕೋರಲಾಯಿತು. | Junior Health Inspector | ಸದರಿ ಸ್ಥಳದಲ್ಲಿ ಶೌಚಾಲಯ ನಿರ್ಮಿಸಲು ಸಾಧ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. |
| 5 | ಪ್ರಸ್ತುತ ಪೌರಕಾರ್ಮಿಕರು ಸುದ್ದಗುಂಟೆ ಪಾಳ್ಯದಿಂದ ಬಯೋ ಮೆಟ್ರಿಕ್ Thumb ನೀಡಲು ಭುವನೇಶ್ವರಿನಗರ ಪಾರ್ಕ್ ಹತ್ತಿರ ಬೆಳಗ್ಗೆ, ಮಧ್ಯಾಹ್ನ ಬರಬೇಕಾಗಿದ್ದು, ಸುದ್ದಗುಂಟೆ ಪಾಳ್ಯದಲ್ಲಿ ಕಾರ್ಯನಿರ್ವಹಿಸುವ ಪೌರಕಾರ್ಮಿಕರಿಗೆ ಸುದ್ದಗುಂಟೆ ಪಾಳ್ಯದಲ್ಲಿ ಬಯೋ ಮೆಟ್ರಿಕ್ Thumb ವ್ಯವಸ್ಥೆ ಮಾಡಲು ಕೋರಲಾಯಿತು. | ಕಿರಿಯಆರೋಗ್ಯ ಪರಿವೀಕ್ಷಕರು | Pending |
| | **ಆರೋಗ್ಯ ಇಲಾಖೆ (HEALTH DPTD)** | | |
| 1 | ವರ್ಸೋವಾ ಲೇಔಟ್ ಹಿಂಬದಿಯಲ್ಲಿರುವ ಖಾಲಿ ಜಾಗದಲ್ಲಿ ಅನಧಿಕೃತ ಉದ್ದಿಮೆಗಳು ನಡೆಸುತ್ತಿದ್ದು, ಇದರಿಂದ ಶಬ್ಧ ಮಾಲಿನ್ಯ ಉಂಟಾಗುತ್ತಿದೆ ಹಾಗೂ ಕಾರ್ಮಿಕರ ಶೆಡ್‌ಗಳಿದ್ದು, ಸ್ವಚ್ಛತೆಕಾಪಾಡದೇ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಲಾಯಿತು. ಸದರಿ ಸ್ಥಳದ ಪರಿವೀಕ್ಷಣೆ ಮಾಡಲಾಯಿತು. | ಹಿರಿಯಆರೋಗ್ಯ ಪರಿವೀಕ್ಷಕರು | Pending |
| 2 | ಪ್ರಸ್ತುತ ಡೆಂಗ್ಯೂ ಕೇಸ್‌ಗಳು ಹೆಚ್ಚಾಗುತ್ತಿದ್ದು, ಲಾರ್ವ ಸರ್ವೆ ಮಾಡಲು ಸೂಚಿಸಲಾಯಿತು. | ಹಿರಿಯಆರೋಗ್ಯ ಪರಿವೀಕ್ಷಕರು | ಪ್ರಗತಿಯಲ್ಲಿರುತ್ತದೆ. |
| | **ಕಾಮಗಾರಿ ಇಲಾಖೆ(Engineering)** | | |
| 1 | ಸುದ್ದಗುಂಟೆ ಪಾಳ್ಯ ಮುಖ್ಯರಸ್ತೆ ಹಾಗೂ ಶಾಂತಮ್ಮ ಬಡಾವಾಣೆಗಳಲ್ಲಿ ಮಳೆ ನೀರಿನ ಚರಂಡಿಗಳಲ್ಲಿ ಹೂಳು ತುಂಬಿದ್ದು, ಹೂಳನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- BBMP | ಚರಂಡಿಗಳಲ್ಲಿ ಹೂಳು ತುಂಬಿದ್ದು, ಈಗಾಗಲೇ ಸದರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಹೂಳನ್ನು ತೆರವುಗೊಳಿಸಲಾಗುವುದು. (Longtime) |
| 2 | ವಾರ್ಡ್ ವ್ಯಾಪ್ತಿಯಲಿರುವರಸ್ತೆ ಗುಂಡಿಗಳನ್ನು ಮುಚ್ಚಿಸಲುಕೋರಲಾಯಿತು. | Assistant Engineer-BBMP | ಕ್ರಮ ವಹಿಸಲಾಗುವುದು. |
| 3 | ಭುವನೇಶ್ವರಿನಗರ ಮುಖ್ಯರಸ್ತೆಯಲ್ಲಿರುವ ನಾಮಫಲಕಕ್ಕೆ ಹೆಸರನ್ನು ನಮೂದಿಸಿ ಪೈಂಟ್ ಮಾಡಿಕೊಡಲು ಕೋರಲಾಯಿತು. | Assistant Engineer-BBMP | ಪ್ರಗತಿಯಲ್ಲಿದೆ. |
| 4 | ಕಗ್ಗದಾಸಪುರ ಮುಖ್ಯರಸ್ತೆಯ ಫುಟ್‌ಪಾತ್ ಒತ್ತುವರಿಗಳನ್ನು ತೆರವುಗೊಳಿಸಲು ಕೋರಲಾಯಿತು. | Assistant Engineer- BBMP | Pending |
| | **ತೋಟಗಾರಿಕಾ ಇಲಾಖೆ(Horticulture)** | | |
| 1 | ಭುವನೇಶ್ವರಿನಗರದಲ್ಲಿರುವ ಪಾರ್ಕ್ ಹತ್ತಿರವಿರುವ ಬೋರ್‌ವೆಲ್‌ನ್ನು ದುರಸ್ಥಿಗೊಳಿಸಲು ಕೋರಲಾಯಿತು ಹಾಗೂ ಸದರಿ ಪಾರ್ಕ್‌ನಲ್ಲಿರುವ gym & children play equipmentಗಳು ಹಾಳಾಗಿದ್ದು, ಅವುಗಳನ್ನು | Assistant Engineer- SWD | Pending |



Scanned with CamScanner

| | | | |
|---|---|---|---|
| | ಸರಿಪಡಿಸಿಕೊಡಲು ಕೋರಲಾಯಿತು. | | |
| | **ಬೀದಿ ದೀಪಗಳ ನಿರ್ವಹಣೆ (Street lights)** | | |
| 1 | ಹಳೇ ಮದ್ರಾಸ್‌ರಸ್ತೆಯಿಂದ ಸುದ್ದಗುಂಟೆ ಪಾಳ್ಯದವರೆಗಿನ ರಸ್ತೆಯಲ್ಲಿ ಒಂದೂ ಬೀದಿ ದೀಪ ಉರಿಯುತ್ತಿರುವುದಿಲ್ಲ ಎಂದು ದೂರಲಾಯಿತು. | Assistant Engineer-Street light | ಪೂರ್ಣಗೊಂಡಿದೆ |
| 2 | ಬೀದಿ ದೀಪಗಳ ಕಂಬಗಳಿಗೆ "Automatic control" ಗಳನ್ನು ಅಳವಡಿಸಲು ಕೋರಲಾಯಿತು. | Assistant Engineer-Street light | Pending |
| 3 | ಅಟಲ್ ಬಿಹಾರಿ ವಾಜಪೇಯಿ ವಾಕಿಂಗ್‌ಟ್ರಾಕ್‌ಲ್ಲಿ ಬೀದಿ ದೀಪಗಳು ಉರಿಯುತ್ತಿಲ್ಲವೆಂದುದೂರಲಾಯಿತು. | Assistant Engineer-Street light | Pending |
| 4 | ಹಳೇ ಮದ್ರಾಸ್‌ರಸ್ತೆ ಹಾಗೂ ವರ್ತೂರು ರಸ್ತೆಯ ಜಂಕ್ಷನ್‌ನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ **High mast** ನ್ನು ಅಳವಡಿಸಲು ಕೋರಲಾಯಿತು. | Assistant Engineer-Street light | TRAFIC POLICEಇಲಾಖೆಯಿಂದ ಮನವಿ ಸಲ್ಲಿಸಿದ್ದು, ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. 30.08.2021 |
| 5 | ನೇತ್ರಾವತಿ ಬಡಾವಣೆಯಲ್ಲಿ ಬೀದಿ ದೀಪಗಳ ನಿರ್ವಹಣೆ ಸಮರ್ಪಕವಾಗಿಲ್ಲವೆಂದು ತಿಳಸಲಾಯಿತು. | Assistant Engineer-Street light | ಪೂರ್ಣಗೊಂಡಿದೆ |
| 6 | ವರ್ಸೋವಾ ಬಡಾವಣೆಯಲ್ಲಿ 6 ಹೊಸ ಬೀದಿ ದೀಪಗಳ ಕಂಬ ಹಾಗೂ ಉಪಕರಣಗಳನ್ನು ಅಳವಡಿಸಲು ಕೋರಲಾಯಿತು. | Assistant Engineer-Street light | Pending |
| 7 | ವರ್ಸೋವಾ ಬಡಾವಣೆಯಲ್ಲಿ ಬೀದಿ ದೀಪಗಳ ಕಂಬಗಳಿಗೆ ಸ್ವಿಚ್ ಬಾಕ್ಸ್‌ಗಳನ್ನು ಅಳವಡಿಸಲು ಕೋರಲಾಯಿತು. | Assistant Engineer-Street light | Pending |
| | **ಕಂದಾಯ ಇಲಾಖೆ(Revenue Department)** | | |
| 1 | ಘನತ್ಯಾಜ್ಯ ನಿರ್ವಹಣೆಯ ವಾಹನಗಳ **Transit Point** ಗಾಗಿ ಸ್ಥಳ ನಿಗಧಿಪಡಿಸಲು ಸೂಚಿಸಲಾಯಿತು. | Revenue Inspector | ಬಿಡಿಎಆಯುಕ್ತರಿಗೆ ಬೈರಸಂದ್ರಗ್ರಾಮದ ಸರ್ವೆ ನಂ.144 ರ ಸ್ಥಳದ ವಿವರಣೆಕೋರಿ ಪತ್ರ ಬರೆಯಲಾಗಿರುತ್ತದೆ. |
| 2 | ಬಾಲಾಜಿ ಬಡಾವಣೆಯಲ್ಲಿರುವ 29ನೇ ಅಡ್ಡರಸ್ತೆಯಲ್ಲಿರುವದೊಡ್ಡ ಖಾಲಿ ನಿವೇಶನದಲ್ಲಿ ಗಿಡ ಗಂಟಗಳು ಬೆಳದುಕೊಂಡು ಹಾಗೂ ಸಾರ್ವಜನಿಕರು ಕಸ ಹಾಕುತ್ತಿದ್ದು, ಅಲ್ಲಿನ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಸದರಿ ನಿವೇಶನದ ಮಾಲೀಕರನ್ನು ಗುರುತಿಸಿ ಅವರ ವಿಳಾಸವನ್ನು ಕೊಟ್ಟಿದಲ್ಲಿ ಕ್ರಮ ಕೈಗೊಳ್ಳಲಾಗುವುದು. | Revenue Inspector | Pending |
| 3 | ಬಾಲಾಜಿ ಬಡಾವಣೆಯ ನಿವಾಸಿಗಳು ತಾವು ಸಲ್ಲಿಸಿರುವ ಮತದಾರರ ಗುರುತಿನಚೀಟಿ ಇದುವರೆವಿಗೂ ವಿತರಣೆಯಾಗಿರುವುದಿಲ್ಲ ಎಂದು ತಿಳಿಸಿದರು. | Revenue Inspector | Pending |
| 4 | ನಾಗವಾರ ಪಾಳ್ಯದಲ್ಲಿ ಇರುವ ಖಾಲಿ ನಿವೇಶನದಲ್ಲಿ ಶೆಡ್‌ಗಳನ್ನು ನಿರ್ಮಿಸಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸದೇ ಇರುವುದರಿಂದ ತುಂಬಾ ತೊಂದರೆಯಾಗುತ್ತಿದ್ದು, ಸದರಿ ನಿವೇಶನದ ಮಾಲೀಕರ ವಿವರಗಳನ್ನು ನೀಡಲು ಸೂಚಿಸಲಾಯಿತು. | Revenue Inspector | Pending |

Scanned with CamScanner

| | | | |
|---|---|---|---|
| | **Road Infra** | | |
| 1 | ಮಲ್ಲೇಶ್‌ಪಾಳ್ಯ ಹಾಗೂ ಕಗ್ಗದಾಸಪುರ ಮುಖ್ಯರಸ್ತೆಗಳಲ್ಲಿ ಹಲವು ಕಡೆ Slab ಗಳು ಮುರಿದು ಹೋಗಿದ್ದು, ಇವುಗಳನ್ನು ಬದಲಾಯಿಸಿ ಕೊಡಲುಕೋರಲಾಯಿತು. | Assistant Engineer- Road Infra | Pending |
| 2 | ಹಳೇ ಮದ್ರಾಸ್‌ರಸ್ತೆಯಲ್ಲಿ Shoulder drain ಗಳಲ್ಲಿ ಕಸ ಕಡ್ಡಿ/ಹೂಳು ತುಂಬಿದ್ದು, ಇದನ್ನು ತೆರವುಗೊಳಸಲು ಕೋರಲಾಯಿತು. | Assistant Engineer- Road Infra | ಪ್ರಗತಿಯಲ್ಲಿರುತ್ತದೆ. |
| | **ಕಲ್ಯಾಣ ಇಲಾಖೆ (WelfareDepartment)** | | |
| 1 | ಅರ್ಹ ಫಲಾನುಭವಿಗಳಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಕಡತವನ್ನು ಸಲ್ಲಿಸಲಾಗಿದ್ದು, ಇದುವರೆವಿಗೂ ವಿತರಣೆಯಾಗಿರುವುದಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | WelfareDepartment | Pending |
| 2 | ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ಮಾಡುವಚಿಕ್ಕ-ಚಿಕ್ಕ ವ್ಯಾಪಾರಸ್ಥರಿಗೆ **vending zone**ಗಾಗಿ ಸ್ಥಳ ನಿಗಧಿಪಡಿಸಲು ತಿಳಸಲಾಯಿತು. | WelfareDepartment | Pending |
| | **ಬೃಹತ್ ನೀರುಗಾಲುವೆ(SWD)** | | |
| 1 | ಮಲ್ಲೇಶ್‌ಪಾಳ್ಯ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯಲ್ಲಿರುವ ಬೃಹತ್ ನೀರುಗಾಲುವೆಯಲ್ಲಿ ಹೂಳನ್ನು ತೆರವುಗೊಳಸಲು ಕೋರಲಾಯಿತು. | Assistant Engineer- SWD | Pending |
| 2 | ಬಾಲಾಜಿ ಬಡಾವಣೆಯ 29ನೇ ಎ ಅಡ್ಡರಸ್ತೆಯಲ್ಲಿ ಖಾಸಗೀ ಸ್ವತ್ತಿನಲ್ಲಿ ಬೃಹತ್ ನೀರುಗಾಲುವೆಗೆ ತಲಪುವ ಚರಂಡಿಯನ್ನು ಅತಿಕ್ರಮಿಸಿಕೊಂಡು ಮನೆ ನಿರ್ಮಿಸುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | Assistant Engineer- SWD | Pending |
| 3 | ನಾಗವಾರ ಪಾಳ್ಯದಲ್ಲಿರುವ ಬೃಹತ್ ನೀರುಗಾಲುವೆಗೆ **Mesh**ನ್ನು ಅಳವಡಿಸುವಂತೆ ಕೋರಲಾಯಿತು. | SWD | Pending |
| 4 | ವರ್ಸೋವಾ ಬಡಾವಣೆ ಹತ್ತಿರವಿರುವ ಬೃಹತ್ ನೀರುಗಾಲುವೆ ಹೂಳೆತ್ತಲು ಅನೇಕಬಾರಿ ಕೋರಿದರೂ ಕ್ರಮ ವಹಿಸಿರುವುದಿಲ್ಲವೆಂದು ತಿಳಸಲಾಗಿದ್ದು, ಇದರ ಬಗ್ಗೆ ಕ್ರಮ ವಹಿಸಲು ಕೋರಲಾಯಿತು. | SWD | Pending |
| | **Trafic Engineering cell** | | |
| 1 | ಹಳೇಮದ್ರಾಸ್ ರಸ್ತೆಯಲ್ಲಿ ಗೋಪಾಲನ್ ಮಾಲ್ ಹತ್ತಿರ ದಿಂದ ಎನ್.ಜಿ.ಇ.ಎಫ್ ಸಿಗ್ನಲ್‌ರವರೆಗೂ ಅಳವಡಿಸಿರುವ ಮೀಡಿಯನ್‌ಗಳನ್ನು **Fix** ಮಾಡದೇ ಇರುವ ಕಾರಣ ಸಂಚಾರಕ್ಕೆ ಅಡ್ಡಿಉಂಟಾಗುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು. | AEE Trafic Engineering cell | Pending |
| | **BWSSB** | | |
| 1 | ಕಗ್ಗದಾಸಪುರಕ್ಕೆ ನೀರು ಸರಬರಾಜು ಕಡಿಮೆ ಇದ್ದು, ಕಗ್ಗದಾಸಪುರ ಮುಖ್ಯರಸ್ತೆಯಲ್ಲಿರುವ ರೈಲ್ವೇಗೇಟ್ ಹತ್ತಿರ ಲಿಂಕ್ ಕಾಮಗಾರಿ ಪ್ರಗತಿಯಲ್ಲಿದ್ದು, ಇದರ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಲಾಯಿತು. | Assistant Engineer-BWSSB | Pending |
| 2 | ಸುದ್ದಗುಂಟೆ ಪಾಳ್ಯದ ಮಹೇಶ್ವರಮ್ಮ ದೇವಸ್ಥಾನದ ಹತ್ತಿರ ಇರುವ ಬೋರ್‌ವೆಲ್‌ನ ಮೋಟರ್ ದುರಸ್ಥಿಗೊಳಸಿ ನೀರು ಬಳಕೆಯಾಗುವಂತೆ ಕ್ರಮ ವಹಿಸಲು ಕೋರಲಾಯಿತು. | Assistant EngineerBWSSB | Pending |
| 3 | ವರ್ತೂರು ಮುಖ್ಯರಸ್ತೆಯಲ್ಲಿರುವ ಒಳಚರಂಡಿಯ ಮ್ಯಾನ್‌ಹೋಲ್ ಮತ್ತು ಪೈಪ್‌ಗಳು ತುಂಬಾ ಹಳೆಯದಾಗಿದ್ದು, ಹಾಳಾಗಿರುತ್ತದೆ ಇದನ್ನು ಬದಲಾಯಿಸಿ ಕೊಡಲು ಕೋರಲಾಯಿತು. | Assistant Engineer-BWSSB | ಕಡತಅನುಮೋದನೆಯ ಹಂತದಲ್ಲಿರುತ್ತದೆ. |



Scanned with CamScanner

| | | | |
|---|---|---|---|
| | ರಹತ್‌ಬಾಗ್ ಬಡಾವಣೆಯಲ್ಲಿ ಸುಮಾರು 17 ಅಪಾರ್ಟ್‌ಮೆಂಟ್ ಹಾಗೂ 15 ಒಂಟಿಮನೆಗಳಿದ್ದು, ಇವುಗಳಿಗೆ ಒಳಚರಂಡಿಯ ಸಂಪರ್ಕ ನೀಡಿರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಯಿತು. | **Assistant Engineer-BWSSB** | ಈಗಾಗಲೇ ಒಳಚರಂಡಿಯ ನೆಟ್‌ವರ್ಕ್‌ಇದ್ದು, ನಿವಾಸಿಗಳು ತಮ್ಮ ಮನೆಗಳ ಒಳಚರಂಡಿ ಸಂಪರ್ಕವನ್ನು ಕಲ್ಪಿಸಿಕೊಳ್ಳಬೇಕು |
| 5 | ಭುವನೇಶ್ವರಿನಗರದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಹಳೆಯ ಕಛೇರಿ ಇದ್ದು, ಸದರಿ ಕಛೇರಿಗೆ ನೀರು ಸರಬರಾಜು ಬಿಲ್‌ಗಳನ್ನು ಪಾವತಿಸಲು ಅನುಕೂಲವಾಗುವಂತೆ **Kiosk** ಅಳವಡಿಸಲು ಕೋರಲಾಯಿತು. | **Assistant Engineer-BWSSB** | ಪತ್ರ ಬರೆಯಲಾಗಿರುತ್ತದೆ. |
| 6 | ನಾಗವಾರ ಪಾಳ್ಯದಲ್ಲಿ ಒಳಚರಂಡಿ ನೀರುಕುಡಿಯುವ ನೀರಿನಜೊತೆ ಮಿಶ್ರಿತಗೊಂಡು ಸರಬರಾಜು ಆಗುತ್ತಿದ್ದು, ಇದರ ಬಗ್ಗೆ ತುರ್ತಾಗಿಕ್ರಮ ಕೈಗೊಳ್ಳಲು ಕೋರಲಾಯಿತು. | **Assistant Engineer** | ಸದರಿ ಭಾಗದಲ್ಲಿ ಹೊಸ ಪೈಪ್‌ಲೈನ್‌ಕಾಮಗಾರಿಗೆ ಈಗಾಗಲೇ ಅಂದಾಜು ಪಟ್ಟಿಯನ್ನುಅನುಮೋದನೆಗೆ ಸಲ್ಲಿಸಲಾಗಿರುತ್ತದೆ. |
| 7 | ನಾಗವಾರ ಪಾಳ್ಯದ 3ನೇ 6ನೇ ಮತ್ತು 7ನೇ ಅಡ್ಡರಸ್ತೆಗಳಲ್ಲಿ ಒಳಚರಂಡಿಯ ಪೈಪ್‌ಗಳಲ್ಲಿ ಬ್ಲಾಕೇಜ್ ಇದ್ದು, ಇದನ್ನು ಸರಿಪಡಿಸಲು ಕೋರಲಾಯಿತು. | **Assistant Engineer** | ಪೂರ್ಣಗೊಂಡಿದೆ |
| | **BESCOM** | | |
| 1 | ರಹತ್‌ಬಾಗ್ ರಸ್ತೆಗಳಲ್ಲಿ ಹಾಗೂ ವರ್ತೂರು ಮುಖ್ಯರಸ್ತೆಗಳಲ್ಲಿ ಮತ್ತು ಕಗ್ಗದಾಸಪುರ ಮುಖ್ಯ ರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ರಸ್ತೆಗಳನ್ನು ಅಗೆಯಲಾಗಿದ್ದು, ತುರ್ತಾಗಿ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕೋರಲಾಯಿತು. | **Assistant EngineerBescom** | 15 ದಿನಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಸಲಾಗುವುದು ಎಂದು ತಿಳಿಸಿರುತ್ತಾರೆ. **ಇದುವರೆವಿಗೂಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ.** |
| 2 | ವರ್ತೂರು ಮುಖ್ಯರಸ್ತೆಯಲ್ಲಿ ಕೇಬಲ್ ಅಳವಡಿಕೆಗಾಗಿ ಅಗೆದಿರುವ ರಸ್ತೆಯನ್ನು ದುರಸ್ಥಿಪಡಿಸಲು ಕೋರಲಾಯಿತು. | **Assistant Engineer-BESCOM** | **Pending** |
| 3 | ಕಗ್ಗದಾಸಪುರ ಮುಖ್ಯರಸ್ತೆಯಲ್ಲಿ ಹಾಗೂ ಬಾಲಾಜಿ ಬಡಾವಣೆಯಲ್ಲಿ ಕೇಬಲ್ ಅಳವಡಿಕೆಗಾಗಿ ಅಗೆದಿರುವ ರಸ್ತೆಯನ್ನು ದುರಸ್ಥಿಪಡಿಸಲು ಕೋರಲಾಯಿತು. | **Assistant Engineer-BESCOM** | **Pending** |
| 4 | ಕಗ್ಗದಾಸಪುರ ಮುಖ್ಯರಸ್ತೆ, ಹಾಗೂ ಮಲ್ಲೇಶ್‌ಪಾಳ್ಯ ರಸ್ತೆಗಳಲ್ಲಿ ಬೆಸ್ಕಾಂ ವತಿಯಿಂದ ಭೂಗತ ಕೇಬಲ್ ಅಳವಡಿಕೆ ಕಾಮಗಾರಿಗೆ ರಸ್ತೆಗಳನ್ನು ಅಗೆಯಲಾಗಿದ್ದು, ತುರ್ತಾಗಿ ರಸ್ತೆ ದುರಸ್ಥಿ ಕಾಮಗಾರಿ ಕೈಗೊಳ್ಳಲು ಕೋರಲಾಯಿತು ಹಾಗೂ **RMU** ಯೂನಿಟ್‌ಗಳನ್ನು ತುರ್ತಾಗಿ ಅಳವಡಿಸಲು ಕೋರಲಾಯಿತು. | **Assistant Engineer-BESCOM** | **Pending** |
| | **ಸಂಚಾರಿ ಪೊಲೀಸ್ ಇಲಾಖೆ(Traffic police deparment)** | | |
| 1 | ನಾಗವಾರ ಪಾಳ್ಯ ಮುಖ್ಯರಸ್ತೆಯಲ್ಲಿ ತುಂಬಾ ಸಂಚಾರದಟ್ಟಣೆಯಾಗುತ್ತಿದ್ದು, ಸಮ-ಬೆಸ ದಿನಾಂಕಗಳಲ್ಲಿ ಒಂದು ಬದಿಯಲ್ಲಿ ಪಾರ್ಕಿಂಗ್ ಮಾಡುವ ವ್ಯವಸ್ಥೆಯನ್ನು ತರುವ ಬಗ್ಗೆ ಖಚಿತಪಡಿಸಲು ಕೋರಲಾಯಿತು. | **Traffic police** | **Pending** |

Scanned with CamScanner

ಸಭೆಯಲ್ಲಿ ಚರ್ಚಿಸಿದ ವಿಷಯಗಳು:-

| ಕ್ರ.ಸಂ | ಮಾಹಿತಿ | ಕ್ರಮ ವಹಿಸಬೇಕಾಗಿರುವಅಧಿಕಾರಿ |
|---|---|---|
| | **ಪ್ರಾಥಮಿಕಆರೋಗ್ಯಕೇಂದ್ರ(PHC)** | |
| 1 | ವೈಧ್ಯಾಧಿಕಾರಿಗಳು ಕೊವಿಡ್-19ಗೆ ಸಂಬಂಧಪಟ್ಟ ಮಾಹಿತಿಯನ್ನು ತಿಳಿಸಿದರು. | ವೈಧ್ಯಾಧಿಕಾರಿಗಳು |
| | **Trafic Engineering cell** | |
| **1** | ಬೆನ್ನಿಗಾನಹಳ್ಳಿ ಸ್ಕೈ ವಾಕ್ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕೆ ಅನುವು ಮಾಡಿಕೊಡಲು ಕೋರಲಾಯಿತು. | **AEE Trafic Engineering cell** |

ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡುವುದು.

**ಕಾರ್ಯದರ್ಶಿಗಳು**
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ:57-ಸಿ.ವಿ.ರಾಮನ್‌ನಗರ

7/8/21.
**ಅಧ್ಯಕ್ಷರು**
ವಿಶೇಷ ಆಯುಕ್ತರು(ಆರೋಗ್ಯ)
ಹಾಗೂ ನೋಡೆಲ್‌ಅಧಿಕಾರಿ
ವಾರ್ಡ್ ಸಂಖ್ಯೆ:57-ಸಿ.ವಿ.ರಾಮನ್‌ನಗರ

Scanned with CamScanner